# ಅಕ್ಕಮಹಾದೇವಿಯ ವಚನಗಳಲ್ಲಿ ಆಧ್ಯಾತ್ಮ ಮತ್ತು ವೈರಾಗ್ಯ

**ಡಾ. ಗೀತಾ ಎ. ಸಿ.**
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಡಾ. ಎನ್.ಎಸ್.ಎ.ಎಂ. ಪ್ರಥಮ ದರ್ಜೆ ಕಾಲೇಜು
ಕೃಷ್ಣರಾಜಪುರ, ಬೆಂಗಳೂರು–89.

**Article Link: https://aksharasurya.com/2023/05/geetha-a-c/**

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹನ್ನೆರಡನೆ ಶತಮಾನ ಅತ್ಯಂತ ಮಹತ್ತರವಾದ ಕಾಲಘಟ್ಟ. ಆ ಸಂದರ್ಭದಲ್ಲಿ ವಚನಕಾರರು ಸಮಾಜೋಧಾರ್ಮಿಕ ಸುಧಾರಣೆಗಳನ್ನು ತಂದು ಸಮಾಜದಲ್ಲಿ ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ ಅಂದರೆ ಸಮಾಜದ ಸಮಸ್ತ ರಂಗಗಳಲ್ಲಿಯೂ ಸರ್ವಾಂಗೀಣ ಬದಲಾವಣೆಯನ್ನು ತಂದ ಕಾಲಘಟ್ಟವಾಗಿದೆ. ಬಸವಣ್ಣ, ಅಲ್ಲಮಪ್ರಭು, ಜೇಡರದಾಸಿಮಯ್ಯ, ಘಟ್ಟಿವಾಳಯ್ಯ, ಅಂಬಿಗರಚೌಡಯ್ಯ, ಅಮುಗೆರಾಯಮ್ಮ, ಆಯ್ದಕ್ಕಿಲಕ್ಕಮ್ಮ, ನೀಲಾಂಬಿಕೆ, ಆಯ್ದಕ್ಕಿಮಾರಯ್ಯ, ಚೆನ್ನಬಸವಣ್ಣ ಹಾಗೂ ಅಕ್ಕಮಹಾದೇವಿ ಇವರೇ ಮೊದಲಾದವರು, ಪ್ರಮುಖ ವಚನಕಾರರು.

ಅಕ್ಕಮಹಾದೇವಿಯವರು ಶಿವಮೊಗ್ಗ ಜಿಲ್ಲೆಯ ಉಡುತಡಿ ಎಂಬ ಗ್ರಾಮದಲ್ಲಿ ಜನಿಸಿದರು. ಇವರ ತಂದೆ ನಿರ್ಮಲಶೆಟ್ಟಿ ಮತ್ತು ತಾಯಿ ಸುಮತಿ. ಈಕೆ 12ನೇ ಶತಮಾನದಲ್ಲಿ ಜನಿಸಿದಳೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಈಕೆ ಬಾಲ್ಯದಿಂದಲೇ ಶಿವಭಕ್ತಿಯನ್ನು ಶಿವ ಪೂಜೆಯನ್ನು ನಡೆಸಿಕೊಂಡು ಬಂದಿದ್ದಳು. ಅಕ್ಕಮಹಾದೇವಿ ತುಂಬಾ ಸುಂದರಿಯಾಗಿದ್ದುದರಿಂದ ರಾಜನಾದ ಕೌಶಿಕನು ಅವಳನ್ನು ಮದುವೆಯಾಗಲು ಬಯಸಿದನು. ರಾಜನ ಬಯಕೆಯನ್ನು ಅಕ್ಕಮಹಾದೇವಿಯ ತಂದೆ ತಾಯಿಯರು ನಿರಾಕರಿಸಲು ಸಾಧ್ಯವಿರಲಿಲ್ಲ. ನಂತರ ಅಕ್ಕಮಹಾದೇವಿ ತನ್ನ ಷರತ್ತುಗಳಿಗೆ ಒಪ್ಪಿದರೆ ಮದುವೆಯಾಗುವುದಾಗಿ ತಿಳಿಸುತ್ತಾಳೆ. ಮೊದಲನೇ ಷರತ್ತು ಲಿಂಗವಂತನಾಗಬೇಕು, ಎರಡನೆಯದು ಗುರು–ಲಿಂಗ ಪೂಜೆಗೆ ಅಡ್ಡಿ ಮಾಡಬಾರದು, ಮೂರನೆಯದು ನನ್ನ ಒಪ್ಪಿಗೆ ಇಲ್ಲದೆ ಮೈ ಮುಟ್ಟಬಾರದೆಂದು ಕೇಳಿಕೊಳ್ಳುತ್ತಾಳೆ. ಆತ ಆಕೆಯ ಷರತ್ತಿಗೆ ಒಪ್ಪಿ ಮದುವೆಯಾಗುತ್ತಾನೆ.

ಮದುವೆಯಾದ ಮೇಲೆ ಆಕೆಯನ್ನು ಒಲಿಸಿಕೊಳ್ಳಲು ಕೌಶಿಕ ರಾಜ ನೋಡುತ್ತಾನೆ. ರಾಣಿಯಾದರೂ ಆಕೆ ಶಿವ ಪೂಜೆ ಮಾಡುವುದನ್ನು

ಬಿಡುವುದಿಲ್ಲ. ಆಗ ಆಕೆಯ ಸೌಂದರ್ಯಕ್ಕೆ ಮರುಳಾಗಿದ್ದ ಕೌಶಿಕನು ಆಕೆಯ ಷರತ್ತುಗಳನ್ನು ಮೀರಿ ನಡೆಯತೊಡಗಿದಾಗ ಉಟ್ಟ ಬಟ್ಟೆಯನ್ನು ಎಸೆದು, ತನ್ನ ಕೂದಲುಗಳಿಂದಲೇ ಮೈಮುಚ್ಚಿಕೊಂಡು ಅರಮನೆಯನ್ನು ಬಿಟ್ಟು ಹೊರಟುಹೋಗುತ್ತಾಳೆ. ಚೆನ್ನಮಲ್ಲಿಕಾರ್ಜುನನನ್ನೇ ತನ್ನ ಪತಿಯೆಂದು ನಂಬಿದ್ದ ಆಕೆ ಶಿವನನ್ನು ಹುಡುಕಿಕೊಂಡು ಶಿವಶರಣರು ಇದ್ದ ಕಲ್ಯಾಣಕ್ಕೆ ಬರುತ್ತಾಳೆ. ಅಲ್ಲಿ ಆಕೆಯನ್ನು ಅಲ್ಲಮಪ್ರಭು ನಾನಾ ರೀತಿಯಲ್ಲಿ ಪ್ರಶ್ನೆಗಳನ್ನು ಕೇಳುವುದರ ಮೂಲಕ ಪರೀಕ್ಷೆಗೆ ಒಳಪಡಿಸಿ, ಅವಳು ನಿಜವಾಗಿಯೂ ವಿರಕ್ತಿಯನ್ನು ಹೊಂದಿ ಬಂದವಳೆಂದು ಸಾಬೀತಾದ ಮೇಲೆ ಅವಳಲ್ಲಿರುವ ಶಿವ ಭಕ್ತಿಯನ್ನು ಅನುಭವ ಮಂಟಪದಲ್ಲಿ ಎಲ್ಲರಿಗೂ ತಿಳಿಸುತ್ತಾನೆ.

ಹೀಗೆ ಅಕ್ಕಮಹಾದೇವಿ ವಚನಗಳನ್ನು ಬರೆಯುತ್ತಾಳೆ. ಆಕೆಯ ವಚನಗಳನ್ನು ಹಾಡಲೂ ಬಹುದು. ಅಲ್ಲದೆ ಈಕೆಯ ವಚನಗಳು ಆಧುನಿಕ ಭಾವಗೀತೆಗಳ ಎಲ್ಲಾ ಲಕ್ಷಣಗಳನ್ನೊಳಗೊಂಡಿವೆ. ಶಿವನೇ ತನ್ನ ಪತಿ ಎಂದು ತನ್ನನ್ನು ಸಮರ್ಪಿಸಿಕೊಂಡವಳು. ಈಕೆಯ ವಚನಗಳಲ್ಲಿ ಆಧ್ಯಾತ್ಮದ ಜೊತೆಗೆ ವೈರಾಗ್ಯವನ್ನು ಕಾಣಬಹುದಾಗಿದೆ. ಅಕ್ಕಮಹಾದೇವಿ ಶರಣಸತಿ–ಲಿಂಗ ಪತಿ ಎಂಬ ಶಿವಶರಣರ ತತ್ವಕ್ಕೆ ಪ್ರಭಾವಿತಳಾದವಳು. ಪಾರಮಾರ್ಥಿಕ ಸತಿತ್ವ ಸಾಧಿಸಿದ ಆಧ್ಯಾತ್ಮಿಕ ಶಕ್ತಿ. ಈ ಸಮಾಜದಲ್ಲಿರುವ ಅಂಧಾನುಕರಣೆ ಸಂಪ್ರದಾಯಗಳನ್ನು ಮೀರಿ ವಚನಗಳ ಮೂಲಕ ಜನರ ಕಣ್ಣನ್ನು ತೆರೆಸಿದವಳು.

ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯ ನೀನು!
ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯ ನೀನು!
ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯ ನೀನು!
ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯ ನೀನು!
ಭಾವಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯ ನೀನು!
ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯ ನೀನು!
ತ್ರಿಕರಣ ಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯ ನೀನು!
ಹೃದಯಕಮಲ ಅರಳದವರಲ್ಲಿ ಇರಲೊಲ್ಲೆಯಯ್ಯ ನೀನು!
ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ
ಹೇಳಾ ಚೆನ್ನಮಲ್ಲಿಕಾರ್ಜುನಯ್ಯ.

ಈ ವಚನದ ಮೂಲಕ ಪೂಜೆಯ ನಾನಾ ವಿಧಾನಗಳನ್ನು ಹೇಳುತ್ತಾ

ಯಾವ ಯಾವ ಪೂಜೆಗೆ ಏನು ಅವಶ್ಯಕ ಎಂದು ತಿಳಿಸಿದ್ದಾರೆ. ದೇಹವನ್ನು ದಂಡಿಸದೇ ಇರುವವರಲ್ಲಿ ಅಭಿಷೇಕ ಪ್ರಿಯನಾದ ಶಿವನು, ಅಭಿಷೇಕವನ್ನು ಬಯಸುವುದಿಲ್ಲ. ಮನಸಿನಲ್ಲಿ ಒಳ್ಳೆಯ ಭಾವನೆ ಇಟ್ಟುಕೊಳ್ಳದೇ ಇರುವವರಿಂದ ಹೂವನ್ನು, ಒಳ್ಳೆಯವರಲ್ಲದವರಿಂದ ಗಂಧಾಕ್ಷತೆಯನ್ನು, ಜ್ಞಾನ ಮೂಡದವ–ರಿಂದ ಆರತಿಯನ್ನು, ಭಾವಶುದ್ಧವಿಲ್ಲದವರಿಂದ ಧೂಪವನ್ನು, ಶಾಂತ ಮನಸ್ಸು ಇಲ್ಲದವರಿಂದ ನೈವೇದ್ಯವನ್ನು, ಕಾಯ, ವಾಚ, ಮನಸ್ಸು ಶುದ್ಧವಿಲ್ಲದವರಿಂದ ತಾಂಬೂಲವನ್ನು ಬಯಸುವುದಿಲ್ಲ. ಹೃದಯ ಕಮಲ ಅರಳದವರಲ್ಲಿ ಇರಲು ಒಪ್ಪುವುದಿಲ್ಲ. ನನ್ನಲ್ಲಿ ಏನಿದೆಯೆಂದು ನನ್ನ ಅಂಗೈಯಲ್ಲಿ ಲಿಂಗವಾಗಿ ವಾಸ ಮಾಡಿದೆ ಚೆನ್ನಮಲ್ಲಿಕಾರ್ಜುನ ಎಂದು ಕೇಳುತ್ತಾಳೆ.

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ!<br>
ಕರಣಂಗಳ ಚೇಷ್ಟೆಗೆ ಮನವೇ ಬೀಜ!<br>
ಎನಗುಳ್ಳುದೊಂದು ಮನ,<br>
ಆ ಮನ ನಿಮ್ಮಲ್ಲಿ ಒಡವೆರೆದ ಬಳಿಕ<br>
ಎನಗೆ ಭಯವುಂಟೆ ಚೆನ್ನಮಲ್ಲಿಕಾರ್ಜುನಯ್ಯ?!

ಸೂರ್ಯ ಉದಯವಾಗುತ್ತಿದ್ದಂತೆ ಜಗತ್ತಿನಲ್ಲಿ ಎಲ್ಲ ಚಟುವಟಿ–ಕೆಗಳು ಆರಂಭವಾಗುತ್ತವೆ. ಲೋಕದ ಎಲ್ಲಾ ಚಟುವಟಿಕೆಗಳಿಗೆ ರವಿಯೇ ಬೀಜ. ಕಾಯಾ, ವಾಚಾ, ಮನಸಾ ತ್ರಿಕರಣಗಳ ಚೇಷ್ಟೆಗೆ ಮನಸ್ಸೇ ಕಾರಣ. ದೇಹ, ಮನಸು ಮತ್ತು ಮಾತಿನ ಕ್ರಿಯೆಗೆ ಕಾರಣವಾಗುವುದು ಮನಸ್ಸು. ಅನೇಕರು ಈ ಪ್ರಪಂಚದ ಸೆಳೆತದಲ್ಲಿ ಸಿಲುಕಿ ತಮ್ಮ ಮನಸ್ಸನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳದೆ ಹಾಳಾಗುತ್ತಾರೆ. ಆದರೆ ತಾನು ಶಿವನಿಗಾಗಿಯೇ ಮನಸ್ಸನ್ನಿಟ್ಟಿರುವುದರಿಂದ, ತನಗೆ ಪ್ರಪಂಚದ ಭವ ಬಂಧನಗಳ ಕಟ್ಟು ಇಲ್ಲವೆಂದು ಹೇಳಿದ್ದಾರೆ. ಮನಸ್ಸು ಮತ್ತು ಜೀವನವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕೆಂದು ಎಚ್ಚರಿಸಿದ್ದಾರೆ.

ಕಿಚ್ಚಿಲ್ಲದ ಬೇಗೆಯಲಿ ಬೆಂದೆನವ್ವ!<br>
ಏರಿಲ್ಲದ ಘಾಯದಲಿ ನೊಂದೆನವ್ವ!<br>
ಸುಖವಿಲ್ಲದ ಧಾವತಿಗೊಂಡೆನವ್ವ<br>
ಚೆನ್ನಮಲ್ಲಿಕಾರ್ಜುನ ದೇವಂಗೊಲಿದು<br>
ಬಾರದ ಭವಂಗಳಲಿ ಬಂದೆನವ್ವ!

ಅಕ್ಕಮಹಾದೇವಿ ತನ್ನ ಜೀವನದಲ್ಲಿ ಅನುಭವಿಸಿದ ಎಲ್ಲಾ ನೋವು

ಮತ್ತು ಕಷ್ಟಗಳನ್ನು ಚೆನ್ನಮಲ್ಲಿಕಾರ್ಜುನನಿಗೆ ಅರ್ಪಿಸುತ್ತಿರುವುದು ಕಂಡು ಬರುತ್ತದೆ. ಬೆಂಕಿ ಇಲ್ಲದಿದ್ದರೂ ಬೆಂಕಿಯಷ್ಟೇ ಉರಿಕೊಡುವ ನೋವಿನಲ್ಲಿ ಬೇಯುತ್ತಿದ್ದೇನೆ. ಮೇಲ್ನೋಟಕ್ಕೆ ಮೈಮೇಲೆ ಗಾಯ ಕಾಣದಿದ್ದರೂ ನೋವಿನಿಂದ ಬಳಲುತ್ತಿದ್ದೇನೆ. ಮನಸ್ಸಿಗೆ ಯಾವುದೇ ರೀತಿಯ ಸುಖ ದೊರೆಯದೆ ಬಳಲಿದ್ದೇನೆ. ನನ್ನ ಚೆನ್ನಮಲ್ಲಿಕಾರ್ಜುನ ಬಾರದೆ ಇರುವ ಸ್ಥಳದಲ್ಲಿ ನಾನು ಬಂದಿದ್ದೇನೆ ಎಂದು ದುಃಖದಲ್ಲಿ ಹೇಳುತ್ತಿದ್ದಾಳೆ. ಈ ಲೋಕದಲ್ಲಿರುವ ಜನರು ಆಧ್ಯಾತ್ಮದ ಬಗ್ಗೆ ಯೋಚಿಸದೆ ಅಂತರಂಗಶುದ್ಧಿ ಇಲ್ಲದೆ ಇತರರಿಗೆ ದೈಹಿಕವಾಗಿ ಮಾನಸಿಕವಾಗಿ ನೋವು ಕೊಡುತಿದ್ದಾರೆ. ಇಂಥ ಕಡೆ ಚೆನ್ನಮಲ್ಲಿಕಾರ್ಜುನನು ಬರುವುದಿಲ್ಲ. ಇಲ್ಲಿಯೆ ತಾನಿರುವುದು. ಆದ್ದರಿಂದ ತನ್ನ ನೋವನ್ನು ಪರಿಹರಿಸು 'ಕಾಪಾಡು' ಎಂದು ಮೊರೆ ಇಡುತ್ತಿದ್ದಾಳೆ.

ಅರಿಯದವರೊಡನೆ ಸಂಗವ ಮಾಡಿದರೆ
ಕಲ್ಲ ಹೊಯ್ದು ಕಿಡಿಯ ತೆಗೆದುಕೊಂಡಂತೆ
ಬಲ್ಲವರೊಡನೆ ಸಂಗವ ಮಾಡಿದರೆ
ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ
ಮಲ್ಲಿಕಾರ್ಜುನಯ್ಯ, ನಿಮ್ಮ ಶರಣರ ಸಂಗ
ಕರ್ಪೂರ ಗಿರಿಯ ಉರಿಯ ಕೊಂಡಂತೆ

ನಾವು ಪ್ರಪಂಚದಲ್ಲಿ ಎಂಥವರ ಸ್ನೇಹ ಮತ್ತು ಸಹವಾಸ ಮಾಡಬೇಕು ಎಂಬುದಾಗಿ ಅಕ್ಕ ತಿಳಿಸುತ್ತಾ, ಏನು ತಿಳಿಯದ ಮೂರ್ಖರ ಸ್ನೇಹ, ಸಹವಾಸ ಮಾಡಿದರೆ ಕಲ್ಲು ಹೊತ್ತು ಅದನ್ನು ಉಜ್ಜಿ ಬೆಂಕಿಯನ್ನು ಪಡೆಯುವಂತಾಗಬಹುದು. ಅಂದರೆ ಬಹಳ ಕಷ್ಟ ಪಡಬೇಕಾಗುವುದು. ಅದರ ಬದಲು ಜ್ಞಾನಿಗಳ ಸಹವಾಸ ಮಾಡಿದರೆ, ಸ್ನೇಹವನ್ನು ಬಯಸಿದರೆ, ಮೊಸರನ್ನು ಕಡೆದಾಗ ದೊರೆಯುವ ಬೆಣ್ಣೆಯಂತಾಗುವುದು. ಇಷ್ಟೆ ಅಲ್ಲದೆ ಚೆನ್ನಮಲ್ಲಿಕಾರ್ಜುನನ ಶರಣರ ಸಂಗವನ್ನು ಮಾಡಿದರೆ, ಶಿವ ಶರಣರ ಸಹವಾಸದಲ್ಲಿದ್ದರೆ ಕರ್ಪೂರವನ್ನು ಉರಿಸಿ, ಅದರಲ್ಲಿ ಬೆಳಕು ಕಂಡಂತೆ ಅಲೌಕಿಕ ಸುಖವನ್ನು, ಆತ್ಮಾನಂದವನ್ನು ಪಡೆಯಬಹುದು ಎಂಬುದಾಗಿ ಅಕ್ಕ ಹೇಳಿದ್ದಾರೆ.

ಬೆರಸುವಡೆ ಬೇಗ ತೋರ!
ಹೊರಹಾಕದಿರಯ್ಯ! ನಿಮ್ಮಲ್ಲಿಗೆ
ಸಲೆ ತಂದ ತೊತ್ತಾನು,

ಎನ್ನ ಹೊರಹಾಕದಿರಯ್ಯ
ನಿಮ್ಮ ನಂಬಿ ಬೆಂಬಳಿ ಬಂದೆನು
ಇಂಬುಗೊಳ್ಳಯ್ಯ ಬೇಗದಲಿ

ಈ ವಚನದಲ್ಲಿ ಅಕ್ಕನ ವಿರಹವೇದನೆ ಆರಂಭಗೊಳ್ಳುತ್ತದೆ. ಹರನ ಹಂಬಲ ಹೆಚ್ಚಾಗುತ್ತದೆ. ಹರನ ಕಡೆಗೆ ಮನಸ್ಸು ತಿರುಗಿಸಿ ತನ್ನ ಬದುಕನ್ನು ಸಾರ್ಥಕ ಮಾಡಿ ಕೊಳ್ಳುವುದರ ಬಗೆಗೆ ಅನುಗ್ರಹಿಸುವಂತೆ ವಿನಂತಿಸಿಕೊಳ್ಳುವ ಭಕ್ತಳೊಬ್ಬಳ ಮನಸಿನ ಭಾವ ಇಲ್ಲಿದೆ. ನಾನು ನಿಮ್ಮನ್ನೇ ನಂಬಿ ಬಂದಿರುವ ಭಕ್ತೆಯಾಗಿದ್ದು ನಿಮ್ಮ ಸರಹದ್ದಿನಿಂದ ತನ್ನನ್ನು ಹೊರಹಾಕದಂತೆ ಕಾಪಾಡುವ ಹೊಣೆ ನಿಮ್ಮದೆಂದು, ಚೆನ್ನಮಲ್ಲಿಕಾರ್ಜುನನಲ್ಲಿ ಮೊರೆಯಿಡುವ ಭಕ್ತಳೊಬ್ಬಳ ನಿವೇದನೆ ಈ ವಚನದಲ್ಲಿದೆ. ಏಕೆಂದರೆ ಭಗವಂತನಲ್ಲಿ ಬಿಟ್ಟು ಬಿಡಲಾಗದ ಅವಿನಾಭಾವ ಸಂಬಂಧ ಅಕ್ಕನದು.

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆನವ್ವಾ
ಎಡೆ ಇಲ್ಲದ ಕಡೆ ಇಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವಂಗಾನೊಲಿದೆ
ಎಲೆ ಅವ್ವಾ ನೀನು ಕೇಳಾ ತಾಯೆ, ಭವವಿಲ್ಲದ ಭಯವಿಲ್ಲದ
ನಿರ್ಭಯ ಚೆಲುವಂಗೊಲಿದೆ ನಾನು, ಕುಲಸೀಮೆ ಇಲ್ಲದ
ನಿಸ್ಸೀಮ ಚೆಲುವಂಗೆ ನಾನೊಲಿದೆ ಇದು ಕಾರಣ
ಚೆನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ
ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು

ಚೆನ್ನಮಲ್ಲಿಕಾರ್ಜುನನನ್ನೇ ತನ್ನ ಗಂಡ ಎಂದು ಭಾವಿಸಿ, ಆತನ ಗುಣಗಳನ್ನು ಈ ವಚನದಲ್ಲಿ ವಿವರಿಸಿದ್ದಾರೆ. ನನ್ನ ಪತಿ ಚೆನ್ನಮಲ್ಲಿಕಾರ್ಜುನ ತುಂಬಾ ಸುಂದರ ವ್ಯಕ್ತಿಯಾಗಿದ್ದಾನೆ. ಆತನಿಗೆ ಯಾವುದೇ ರೀತಿಯ ಕೆಡುಕು ಇರುವುದಿಲ್ಲ. ಸಾವು ಹತ್ತಿರಕ್ಕೆ ಸುಳಿಯುವುದಿಲ್ಲ. ಯಾವುದೇ ಅಡೆತಡೆ, ತೆರೆಗಳು ಮುಚ್ಚುಮರೆಗಳು ನನ್ನ ಚೆಲುವನಿಗಿರುವುದಿಲ್ಲ. ನನ್ನ ಚೆಲುವನಿಗೆ ಯಾವುದೇ ಸಂಸಾರ ಇಲ್ಲ ಭಯವು ಇಲ್ಲ. ಇಂಥವನಿಗೆ ಮನಸ್ಸು ಕೊಟ್ಟು ಪತಿ ಎಂದು ಒಪ್ಪಿಕೊಂಡಿದ್ದೇನೆ. ಇವನಿಗೆ ಇಂಥದೇ ಊರು ಎಂಬುವುದಿಲ್ಲ. ಇಡೀ ಪ್ರಪಂಚವೇ ಈತನದು. ಹೀಗೆ ಅಸಾಮಾನ್ಯವಾದ ಸಾಮರ್ಥ್ಯವುಳ್ಳವನಿಗೆ ನಾನು ಒಲಿದು ಪತಿ ಎಂದು ಒಪ್ಪಿಕೊಂಡಿದ್ದೇನೆ. ಗಂಡ ಎಂದರೆ ಚೆನ್ನಮಲ್ಲಿಕಾರ್ಜುನನೊಬ್ಬನೆ ಇತರರೆಲ್ಲರೂ ನಿಷ್ಪ್ರಯೋಜಕರು ಎಂದು ಹೇಳುತ್ತಾರೆ.

ಹಸಿದರೆ ಊರೊಳಗೆ ಭಿಕ್ಷಾನ್ನಗಳುಂಟು

ತೃಷೆಯಾದರೆ ಕೆರೆ ಬಾವಿ ಹಳ್ಳಗಳುಂಟು
ಶಯನಕ್ಕೆ ಹಾಳು ದೇಗುಲವುಂಟು
ಚೆನ್ನಮಲ್ಲಿಕಾರ್ಜುನಯ್ಯ ಆತ್ಮ ಸಂಗಾತಕ್ಕೆ ನೀನೆನಗುಂಟು

ಹಸಿವಾದಾಗ ಊರೊಳಗೆ ಹೋಗಿ ನಾಲ್ಕಾರು ಮನೆಯಲ್ಲಿ ಭಿಕ್ಷೆ ಬೇಡಿದರೆ ಭಿಕ್ಷೆ ಸಿಗುವುದು. ಇದನ್ನೇ ಮಹಾ ಪ್ರಸಾದವೆಂದು ಭಾವಿಸಿ ಸೇವಿಸಿದರೆ ನಮ್ಮ ಹಸಿವು ಪರಿಹಾರವಾಗುವುದು. ಬಾಯಾರಿಕೆಯನ್ನು ನೀಗಿಸಲು ಭಗವಂತನೇ ನೀರನ್ನು ಕೊಟ್ಟಿದ್ದಾನೆ. ಕೆರೆ, ಬಾವಿ, ಹಳ್ಳಗಳಿಗೆ ಹೋಗಿ ನೀರನ್ನು ಕುಡಿದು ನಮ್ಮ ಬಾಯಾರಿಕೆಯನ್ನು ಇಂಗಿಸಬಹುದು. ಮಲಗಲು ಹಾಳುಬಿದ್ದಿರುವ ದೇವಾಲಯಗಳವೆ. ಆತ್ಮ ಸಂಗಾತಿಯಾದ ಚೆನ್ನಮಲ್ಲಿಕಾರ್ಜುನನಿದ್ದಾನೆ. ಬದುಕಲು ಇಷ್ಟೆಲ್ಲ ಸೌಕರ್ಯವಿದ್ದ ಮೇಲೆ ಇನ್ನೇನು ಬೇಕು? ಅಂದರೆ ಈ ಪ್ರಪಂಚದಲ್ಲಿ ನಮಗೆ ಜೀವಿಸಲು ಬೇರೆ ಏನು ಹೆಚ್ಚಿನ ಅಗತ್ಯ ಬೇಕಾಗಿಲ್ಲ ಎಂದು ಹೇಳಿದ್ದಾರೆ.

ಹೊಳೆವ ಕೆಂಜೆಡೆಗಳ ಮೇಲೆ
ಎಳೆವೆಳುದಂಗಳು ಫಣಿಮಣಿ
ಕರ್ಣಕುಂಡಲವ ನೋಡವ್ವ! ರುಂಡ
ಮಾಲೆಯ ಕೊರಳವನ ಕಂಡೊಡೆ
ಒಮ್ಮೆ ಬರಹೇಳವ್ವ ಗೋವಿಂದನ
ನಯನ ಉಂಗುಟದ ಮೇಲಿಪ್ಪುದು
ಚೆನ್ನಮಲ್ಲಿಕಾರ್ಜುನ ದೇವಂಗಿದು ಕುರುಹವ್ವ.

ಅಕ್ಕಮಹಾದೇವಿಗೆ ತನ್ನ ಒಡೆಯನನ್ನು ಎಷ್ಟು ನೆನೆದರೂ ತೃಪ್ತಿಯಿಲ್ಲ. ಅವನ ರೂಪವನ್ನು ಕಂಡಷ್ಟು ಕಾಣಬೇಕೆಂಬ ಹಂಬಲ. ತಾನು ಕನಸಿನಲ್ಲಿ ಕಂಡ ಚೆನ್ನಮಲ್ಲಿಕಾರ್ಜುನನ ಬಗ್ಗೆ ಹೇಳುತ್ತಾ, ಕನಸು ನನಸಿನಲ್ಲೂ ಶಿವನ ಧ್ಯಾನವನ್ನೇ ಮಾಡುತ್ತಾಳೆ. ತನ್ನ ಆಧ್ಯಾತ್ಮ ವಲ್ಲಭನಾದ ಚೆನ್ನಮಲ್ಲಿಕಾರ್ಜುನನ ಬಗೆಗೆ ಯೋಚಿಸುವುದೇ ನಿತ್ಯದ ಕಾಯಕ. ತನ್ನ ದೈವತ್ವದ ನಿರಾಕಾರಕ್ಕೆ ಆಕಾರವನ್ನು ನೀಡಿ, ಸಾಕಾರಗೊಳಿಸಬಲ್ಲ ಈಕೆ, ಆತನಿಗೆ ಅಂದವಾದ ಆಕಾರವನ್ನೇ ನೀಡಿದ್ದಾಳೆ. ಶೋಭಿಸುವ ಕೆಂಜೆಡೆಗಳ ಮುಡಿಗೆ ಸೌಂದರ್ಯವನ್ನು ನೀಡ ಬಲ್ಲ ಕೀರಿಟಧಾರಿಣಿಯಾದ ಈತ ಶುಭ್ರವಾದ ಹಲ್ಲನ್ನು ಹೊಂದಿರುವವ. ನಗುಮೊಗದ ಕಾಂತಿಯಿಂದ ಹದಿನಾಲ್ಕು ಲೋಕವನ್ನು ಬೆಳಗಬಲ್ಲ ಇಂಥ ಸುಂದರವಾದವನನ್ನು ತಾನು ಕನಸ್ಸಿನಲ್ಲಿ ಕಂಡು ತನ್ನ ಗುರುತು ಸಿಕ್ಕಿದರೆ ತನ್ನೆಡೆಗೆ ಬರುವಂತೆ ಹೇಳೆಂದು

ಕೇಳಿಕೊಳ್ಳುವ ಸನ್ನಿವೇಶವನ್ನು ಇಲ್ಲಿ ಚಿತ್ರಿಸಿದ್ದಾರೆ. ಶೋಭಿಸುವ ಜಡೆಯನ್ನು ಹೊಂದಿರುವ, ಬಾಲಚಂದಿರನನ್ನು ಮುಡಿಯಲ್ಲಿ ಧರಿಸಿರುವ, ನಾಗಮಣಿಯನ್ನೇ ಕರ್ಣಕುಂಡಲವನ್ನಾಗಿ ಮಾಡಿಕೊಂಡಿರುವ, ರುಂಡಗಳ ಮಾಲೆಯನ್ನೇ ಕೊರಳಲ್ಲಿ ಧರಿಸಿರುವ, ಹಣೆಯಲ್ಲಿ ಕಣ್ಣನ್ನು ಹೊಂದಿರುವ ತನ್ನ ಮನದೊಡೆಯನನ್ನು ಕಂಡರೆ ಬರ ಹೇಳಿರೆಂದು ಸುತ್ತಲಿರುವವರೊಂದಿಗೆ ವಿನಂತಿಸಿಕೊಳ್ಳುತ್ತಾಳೆ.

ಅರಲುಗೊಂಡ ಕೆರೆಗೆ ತೊರೆ ಬಂದು ಹಾಯ್ದಂತಾಯಿತ್ತು
ಬರಲುಗೊಂಡ ಸಸಿಗೆ ಮಳೆ ಸುರಿದಂತಾಯಿತ್ತು ನೋಡಾ ಇಂದೆನಗೆ
ಇಹದ ಸುಖ ಪರದ ಗತಿ ನಡೆದು ಬಂದಂತಾತ್ತು ನೋಡಾ ಎನಗೆ
ಚೆನ್ನಮಲ್ಲಿಕಾರ್ಜುನಯ್ಯಾ
ಗುರುಪಾದವ ಕಂಡು ಧನ್ಯಳಾದೆ ನೋಡಾ (ಪು.17)

ಅಕ್ಕನಿಗೆ ಗುರುವನ್ನು ಕಂಡು ಆದ ಸಂತೋಷವನ್ನ ಇಲ್ಲಿ ತಿಳಿಸಿದ್ದಾಳೆ. ಕೆರೆಯ ನೀರೆಲ್ಲಾ ಬತ್ತಿ ಹೋಗಿರುವ ಸಂದರ್ಭದಲಿ ನದಿಯ ನೀರು ಹರಿದು ಬಂದರೆ ಕೆರೆಯಲ್ಲಿ ನೀರು ತುಂಬಿ ಚೈತನ್ಯಗೊಳ್ಳುತ್ತದೆ. ನೀರೇ ಇಲ್ಲದೇ ಒಣಗಿದ ಸಸಿಗೆ ಮಳೆ ಸುರಿದರೆ ಅದು ಹಚ್ಚಹಸಿರಾಗುತ್ತದೆ. ಹಾಗೆಯೇ ಗುರು ತನ್ನ ಮನೆಗೆ ಬಂದು ಇಹ ಮತ್ತು ಪರದ ಸುಖ ದೊರೆತು, ಗುರುಪಾದವ ಕಂಡು ಧನ್ಯಳಾದೆ ಎಂದು ಮನದುಂಬಿ ಹೇಳುತ್ತಾಳೆ.

ಎನ್ನ ನಾನರಿಯದಲ್ಲಿ ಎಲ್ಲಿರ್ದೆ ಹೇಳಯ್ಯಾ
ಚಿನ್ನದೊಳಗಣ ಬಣ್ಣದಂತೆ ಎನ್ನೊಳಗಿರ್ದೆ
ಅಯ್ಯಾ ಎನ್ನೊಳಗೆ ಇನಿತಿರ್ದು ಮೈದೋರದ ಭೇದವ
ನಿಮ್ಮಲ್ಲಿ ಕಂಡೆ ಕಾಣಾ ಚೆನ್ನಮಲ್ಲಿಕಾರ್ಜುನಾ

ನಾನು ಯಾರು ಎಂದು ಗೊತ್ತಾಗುವ ಮೊದಲು ನೀನು ಎಲ್ಲಿದ್ದೆ? ಇದ್ದರು ಇದ್ದಿರಬಹುದು. ಬಂಗಾರದೊಳಗೆ ಅಡಗಿರುವ ಬಣ್ಣದ ಹಾಗೆ. ನನ್ನೊಡನೆ ಇದ್ದೂ ಕೂಡ ಯಾಕೆ ಮೈದೋರದೆ ಹೋದೆ? ನನ್ನೊಳಗಿದ್ದೂ ನನ್ನಿಂದ ಬೇರೆಯಾಗಿಯೇ ಕೈಗೆ ಸಿಗದ ಹಾಗೆ ಕಣ್ಣಿಗೆ ಕಾಣದೆ ಇರುವ ಭೇದವನ್ನು ಮಾತ್ರ ಕಂಡೆ ಎನ್ನುತ್ತಾಳೆ. ಇರುವ ಒಂದು ಎರಡಾಗಿ ಮತ್ತೆ ಒಂದೇ ಆಗಲಾರದ ದುಃಖವನ್ನು ಈ ವಚನ ಹೇಳುತ್ತದೆ.

ಅಮೃತವನುಂಬ ಶಿಶುವಿಂಗೆ
ವಿಷವನೂಡುವರೆ ಅಯ್ಯಾ

ನೆಳಲ ತಂಪಿನಲ್ಲಿ ಬೆಳೆದ ಸಸಿಗೆ ಉರಿಯ ಬೇಲಿಯ ಕಟ್ಟುವರೆ ಅಯ್ಯಾ
ಚೆನ್ನಮಲ್ಲಿಕಾರ್ಜುನಯ್ಯಾ!

ಹಾಲು ಕುಡಿಯುವ ಶಿಶುವಿಗೆ ಯಾರದರೂ ವಿಷವನ್ನು ಉಣ್ಣಿಸುವರೇನೊ? ಅಯ್ಯಾ ನೆರಳಲ್ಲಿ ಬೆಳೆಯುವ ಸಸಿಗೆ ಯಾರಾದರೂ ಉರಿಯುವ ಬೆಂಕಿಯ ಬೇಲಿಯನ್ನು ಕಟ್ಟುವರೆ? ಅಯ್ಯಾ ಚೆನ್ನಮಲ್ಲಿಕಾರ್ಜುನಯ್ಯ ನೀನೇ ಹೇಳಯ್ಯ ಎಂಬುದಾಗಿ ಅಕ್ಕ ಹೇಳುತ್ತಾಳೆ.

ತೆರಣಿಯಹುಳು ತನ್ನ ಸ್ನೇಹದಿಂದ ಮನೆಯಮಾಡಿ
ತನ್ನ ನೂಲು ತನ್ನನ್ನೇ ಸುತ್ತಿ ಸುತ್ತಿ ಸಾವ ತೆರನಂತೆ!
ಮನ ಬಂದುದ ಬಯಸಿ ಬಯಸಿ ಬೇವುತ್ತಿರುವೆನಯ್ಯಾ!
ಅಯ್ಯಾ ಎನ್ನ ಮನದ ದುರಾಶೆಯ ಮಾಣಿಸಿ
ನಿಮ್ಮ ತೋರಾ ಚೆನ್ನಮಲ್ಲಿಕಾರ್ಜುನ

ದುರಾಸೆ ಮನುಷ್ಯನ ಬದುಕನ್ನು ಹಾಳು ಮಾಡುತ್ತದೆ ಎಂಬುದನ್ನು ತಿಳಿಸುತ್ತದೆ. ರೇಷ್ಮೆ ಹುಳು ತನ್ನಲ್ಲಿರುವ ಜಿಗುಟಾದ ರಸದಿಂದ ಗೂಡು ಕಟ್ಟಿಕೊಳ್ಳುತ್ತದೆ. ಈ ಗೂಡಿನಿಂದಲೇ ಅದು ಮರಣ ಹೊಂದುತ್ತದೆ. ಹೇಗೆಂದರೆ ರೇಷ್ಮೆಯ ವ್ಯಾಪಾರಿ ರೇಷ್ಮೆಗಾಗಿ ಆ ಗೂಡನ್ನು ಬಿಸಿ ನೀರಿಗೆ ಅದ್ದುತ್ತಾನೆ. ಆಗ ಆ ಹುಳು ಸಾಯುತ್ತದೆ. ಹಾಗೆಯೇ ಮನುಷ್ಯ ಎಲ್ಲಾವನ್ನು ತನಗೆ ಬೇಕೆಂದು ಆಸೆ ಪಡುತ್ತಾನೆ. ಹೀಗೆ ಮನುಷ್ಯನ ಮನಸ್ಸಿನ ದುರಾಸೆಯನ್ನು ಹೋಗಲಾಡಿಸ ಬೇಕಾದರೆ ನಿನ್ನ ಕೃಪೆ ಬೇಕಾಗುತ್ತದೆ ಎಂದು ಭಗವಂತನನ್ನು ಬೇಡಿ ಕೊಳ್ಳುತ್ತಾಳೆ.

ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ!
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ!
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ!
ನೆನಹಿಂಗೆ ಅರಿವಾಗಿ ಕಾಡಿತ್ತು ಮಾಯೆ!
ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ!
ಚೆನ್ನಮಲ್ಲಿಕಾರ್ಜುನ, ನೀನೊಡ್ಡಿದ ಮಾಯೆಯನಾರೂ ಗೆಲ್ಲಬಾರದು!

ಮಾಯೆ ಮನುಷ್ಯನನ್ನು ಕೆಳಹಂತಕ್ಕೆ ತಳ್ಳುತ್ತದೆ ಎಂಬುದನ್ನು ಈ ವಚನದಲ್ಲಿ ಅಕ್ಕಮಹಾದೇವಿಯವರು ಸ್ಪಷ್ಟಪಡಿಸುತ್ತಾರೆ. ನಮ್ಮ ಕಣ್ಣಿಗೆ ಕಾಣಿಸುತ್ತಿರುವ ಪ್ರಕೃತಿಯೇ ಮಾಯೆ. ಪ್ರಕೃತಿಯನ್ನು ಸೃಷ್ಟಿ ಮಾಡಿದವನು ಶಿವ. ಆದ್ದರಿಂದ ಶಿವನು ಮಾಯೆ ಉಳ್ಳವನು. ಮಾಯೆ ಮತ್ತು ಶಿವನಿಗೆ ಅವಿನಾಭಾವ ಸಂಬಂಧವಿದೆ.

ದೇಹಕ್ಕೆ ನೆರಳೇ ಮಾಯೆ. ದೇಹದಲ್ಲಿ ಪ್ರಾಣವಿರುತ್ತದೆ. ಪ್ರಾಣಕ್ಕೆ ಮನಸ್ಸೇ ಮಾಯೆ. ಮನಸ್ಸಿನಲ್ಲಿರುವ ನೆನಹುಗಳೇ ಮಾಯವಾಗಿ ಕಾಡುತ್ತದೆ. ನೆನಪಿನಲ್ಲಿರುವ ಜ್ಞಾನವು ಮಾಯೆಯಾಗುತ್ತದೆ. ಜಗತ್ತಿನಲ್ಲಿರುವ ಎಲ್ಲಾ ಜೀವಿಗಳಿಗೆ ಮಾಯೇ ಬಾರುಕೋಲನ್ನೆತ್ತಿ ಆಡಿಸುತ್ತದೆ. ಮಾಯೆಯನ್ನು ಗೆಲ್ಲುವುದು ಅಷ್ಟು ಸುಲಭವಲ್ಲ.

ಎನ್ನ ಮಾಯದ ಮದವ ಮುರಿಯಯ್ಯ!
ಎನ್ನ ಕಾಯದ ಕಳವಳವ ಕೆಡಿಸಯ್ಯ!
ಎನ್ನ ಜೀವದ ಜಂಜಡವ ಬಿಡಿಸಯ್ಯ
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯ

ಅಜ್ಞಾನದಿಂದ ಮನುಷ್ಯನಲ್ಲಿ ಮದ ಹೆಚ್ಚಾಗುತ್ತದೆ. ಅಹಂಕಾರವೇ ಇದಕ್ಕೆ ಕಾರಣ. ಮಾನವ ಕಠಿಣ ಹೃದಯದವನಾಗುತ್ತಾನೆ. ತುಂಬು ತಾರುಣ್ಯದ ಚೆಲುವು ಹೊಂದಿರುವ ಈ ಶರೀರವನ್ನು ನೋಡಿ ಬಂದವನೇ ರಾಜ. ಆದ್ದರಿಂದ ಈ ದೇಹದ ಸೌಂದರ್ಯವನ್ನು ಕಳೆ. ಲೋಕದ ಗಂಡುಗಳಿಗೆ ನನ್ನಲ್ಲಿ ಹೆಣ್ಣು ತನ ಕಾಣದೇ ಹೋಗಲಿ. ಎನ್ನ ದೇವ ಎಂದು ಕೇಳಿಕೊಳ್ಳುತ್ತಾಳೆ.

ಚಿಲಿಮಿಲಿ ಎಂದೋದುವ ಗಿಳಿಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?
ಸರೋವರದೊಳಗಾಡುವ ಹಂಸಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?
ಸರವೆತ್ತಿ ಪಾಡುವ ಕೋಗಿಲೆಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?
ಎರಗಿ ಬಂದಾಡುವ ತುಂಬಿಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?
ಗಿರಿಗಹ್ವರದೊಳಗಾಡುವ ನವಿಲುಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?

ಚೆನ್ನಮಲ್ಲಿಕಾರ್ಜುನ ಅಕ್ಕಮಹಾದೇವಿಯ ವಿರಹ ವೇದನೆ ಇಲ್ಲಿ ವ್ಯಕ್ತವಾಗಿದೆ. ಮರಗಳನ್ನು ಪಶು ಪಕ್ಷಿಗಳನ್ನು ಕುರಿತು ನನ್ನ ಮಲ್ಲಿಕಾರ್ಜುನನನ್ನು ಕಂಡಿದ್ದೀರಾ? ಎಂದು ಕೇಳುತ್ತಾಳೆ. ಚಿಲಿಮಿಲಿ ಎಂದು ಹಾಡುವ ಗಿಳಿಗಳಿರಾ, ಸರೋವರದೊಳಗಾಡುವ ಹಂಸಗಳಿರಾ, ಇಂಪಾಗಿ ಹಾಡುವ ಕೋಗಿಲೆಗಳಿರಾ, ಪರ್ವತಗಳ ಗುಹೆಯಲ್ಲಿ ನಲಿದಾಡುವ ನವಿಲುಗಳೇ, ಹಾರಾಡುತ್ತಿರುವ ದುಂಬಿಗಳೆ

ಚೆನ್ನಮಲ್ಲಿಕಾರ್ಜುನನು ಎಲ್ಲಿದ್ದಾಳೆಂದು ಕಂಡಿದ್ದಿರಾ? ಕಂಡರೆ ಹೇಳಿ ಎಂದಿದ್ದಾಳೆ.

ಹೀಗೆ ಅಕ್ಕಮಹಾದೇವಿ ಶ್ರೇಷ್ಠ ವಚನಕಾರ್ತಿಯಾಗಿ. ಶರಣೆಯಾಗಿ, ತನ್ನ ಗುರಿ ಸಾಧನೆಗಾಗಿ ಹಗಲು ರಾತ್ರಿ ಪಟ್ಟ ಶ್ರಮ ಅಪಾರವಾದುದು. ಅದಕ್ಕೆ ಸಾಕ್ಷಿಯಾಗಿ ವಚನಗಳು ರೂಪುಗೊಂಡಿವೆ. ಆಕೆಯ ಅಂತಂಗದ ಅಭಿವ್ಯಕ್ತಿಯ ಮೂಲಕ ಗೋಚರಗೊಂಡ ವಿಚಾರಗಳು ಮನಮುಟ್ಟುವಂತಿವೆ.

**ಪರಾಮರ್ಶನ ಗ್ರಂಥ**


1. ಸಂ. ಡಾ. ಎಲ್. ಬಸವರಾಜು, ಅಕ್ಕನ ವಚನಗಳು, ಗೀತಾ ಬುಕ್ ಹೌಸ್, ಮೈಸೂರು, 1997.
2. ಓ. ಎಲ್. ನಾಗಭೂಷಣಸ್ವಾಮಿ, ವಚನ ವಿಚಾರ, ಅಲ್ಲಮ ಪ್ರಕಾಶನ, ಮೈಸೂರು, 2014.
3. ಡಾ. ಶೈಲಜಾ ಉಡಚಣ, ವಚನಕಾರ್ತಿಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1996.
4. ಡಾ. ಸವಿತ ಕೊಟಬಾಗಿ, ಸಾಹಿತ್ಯ ಮಂಥನ, ಆತ್ಮಶ್ರೀ ಪ್ರಕಾಶನ, 2014.